ಅಂಗಾಂಗ ಛಿದ್ರ ಛಿದ್ರಗೊಂಡು ಪ್ರಾಣ ಕಳೆದುಕೊಂಡರು. ಈ ದೃಶ್ಯಗಳನ್ನ ನೋಡುತ್ತಿದ್ದ ರಾಜ ಬೇಡ ಬೇಡ ಎಂದು ಚೀರುತ್ತಿದ್ದ. ಆದರೆ ಆ ನಾಯಿಗಳಲ್ಲಿ ಒಂದು ದೊಡ್ಡ ನಾಯಿ ರಾಜನನ್ನು ಹಾಗೂ ರಾಣಿಯನ್ನೂ ಅವರ ಕಾಲಿನಲ್ಲಿ ಕಚ್ಚಿಹಿಡಿದು ಆಕಾಶಕ್ಕೆ ಎತ್ತಿ ಎಸೆದು ಸಾಯಿಸಿಬಿಟ್ಟಿತು.

ಇದನ್ನೆಲ್ಲಾ ನೋಡಿದ ರಾಜನ ಸೈನಿಕರು ಭೀತರಾಗಿ ಸೈನಿಕನಿಗೆ ವಿನಂತಿಸಿಕೊಂಡರು, ನೀನು ನಮ್ಮ ರಾಜನಾಗು, ರಾಜಕುಮಾರಿಯನ್ನು ಮದುವೆ ಆಗು ಎಂದು ವಿನಂತಿಸಿಕೊಳ್ಳುತ್ತಾರೆ. ಅಲ್ಲಿ ಸೇರಿದ್ದ ಜನರೂ ಸಹ ಅದೇ ರೀತಿ ಬೇಡಿಕೊಳ್ಳುತ್ತಾರೆ. ಆಗ ರಾಜಕುಮಾರಿ ತಾಮ್ರದ ಕೋಟೆಯಿಂದ ಹೊರಗೆ ಬರುತ್ತಾಳೆ. ಸೈನಿಕನನ್ನು ರಾಜನ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮೆರವಣಿಗೆಯಲ್ಲಿ ಕರೆದುಕೊಂಡು ಅರಮನೆಗೆ ಹೋಗುತ್ತಾರೆ. ರಾಜಕುಮಾರಿಯೊಡನೆ ಸೈನಿಕನ ಮದುವೆ ವಾರಗಟ್ಟಲೆ ವಿಜೃಂಭಣೆಯಿಂದ ನಡೆಯುತ್ತದೆ. ಮೂರು ನಾಯಿಗಳು ಸುಂದರವಾದ ಮೇಜಿನ ಮೇಲೆ ವಿರಾಜಮಾನವಾಗಿ ಕುಳಿತು ಎಲ್ಲರೊಡನೆ ಆನಂದಿಸಿರುತ್ತವೆ. ರಾಜಕುಮಾರಿ ಮತ್ತು ಸೈನಿಕ ರಾಜರಾಣಿಯರಾಗಿ ಸುಖವಾಗಿ ಬಾಳುತ್ತಾರೆ.

### ಆಂಡರ್ಸನ್

'ನನ್ನ ಜೀವನವೇ ಒಂದು ಫೇರಿ ಟೇಲ್' ಎಂದು ಹೇಳಿದ, ಹಲವಾರು ರೋಚಕ ಕಥೆಗಳ ಜನಕ ಡಾನಿಷ್ ಲೇಖಕ ಆಂಡರ್ಸನ್. ಅವನು ಹುಟ್ಟಿದ್ದು 02–04–1805ರಲ್ಲಿ ಡೆನ್ಮಾರ್ಕ್‌ನ ಕೋಪೆನ್‌ಹೇಗನ್ ಪಟ್ಟಣದ ಒಂದು ಸಣ್ಣ ಚಪ್ಪಲಿ ಗೂಡಿನಲ್ಲಿ. ಇವನ ತಂದೆ ಚಪ್ಪಲಿ ತಯಾರಿಸುವವನಾಗಿದ್ದನು. ಆಂಡರ್ಸನ್‌ಗೆ ಬಾಲ್ಯದಲ್ಲಿ ಬಡತನದಿಂದಾಗಿ ವಿದ್ಯಾಭ್ಯಾಸ ಪಡೆಯಲಾಗಲಿಲ್ಲ. ಅವನ 18ನೇ ವಯಸ್ಸಿನಲ್ಲಿ ಅವನನ್ನು ಮಹಾರಾಜರ ವೆಚ್ಚದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸೇರಿಸಲಾಯಿತು. ಅವನು ತನ್ನ 23ನೇ ವಯಸ್ಸಿನಲ್ಲಿ ಕೋಪೆನ್‌ಹೇಗನ್ ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆ ಪಾಸು ಮಾಡಿದ. ಒಂದು ವರ್ಷದ ನಂತರ ಕಷ್ಟಕರವಾದ ಎರಡನೇ ಪರೀಕ್ಷೆ ಪಾಸು ಮಾಡಿದ. ಬಳಿಕ ರಾಯಲ್ ಥಿಯೇಟರ್‌ಗಾಗಿ ಹಲವಾರು ನಾಟಕಗಳನ್ನು ರಚಿಸಿದ. ತನ್ನ ಉತ್ತಮ ಶೈಲಿಯ ರೋಚಕ ಲೇಖನಗಳಿಂದಾಗಿ ಜನರ ಹಾಗೂ ರಾಜರ ಮೆಚ್ಚುಗೆಯನ್ನೂ ಗಳಿಸಿ, ರಾಜರಿಂದ ಹಲವಾರು ಬಿರುದು ಬಹುಮಾನಗಳನ್ನು ಪಡೆದ. ಆಂಡರ್ಸನ್ ಬ್ರಹ್ಮಚಾರಿಯಾಗಿಯೇ ಇದ್ದು ತನ್ನ 70ನೇ ವಯಸ್ಸಿನಲ್ಲಿ ನಿಧನನಾದ.

### ಹಳದೀಪುರ ವಾಸುದೇವರಾವ್

ಕಳೆದ ಮೂವತ್ತು ವರ್ಷಗಳಿಂದ ಕನ್ನಡದ ವಿವಿಧ, ಪತ್ರಿಕೆಗಳಿಗೆ ತಮ್ಮ ಲೇಖನಗಳ ಮೂಲಕ ಕನ್ನಡ ಸಾರಸ್ವತ ಲೋಕಕ್ಕೆ ಪರಿಚಿತರಾಗಿರುವ ವಾಸುದೇವರಾವ್, ವೃತ್ತಿಯಿಂದ ಸಿವಿಲ್ ಎಂಜಿನೀಯರ್ ಆಗಿ, ಸರ್ಕಾರದ ವಿವಿಧ ಹಂತಗಳಲ್ಲಿ ಉನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲಸಿದ್ದಾರೆ. ಸಂಸ್ಕೃತ ಸುಭಾಷಿತಗಳ ಸಂಗ್ರಹ 'ನೀತಿ ಭಂಡಾರ', ಕವನ ಸಂಗ್ರಹ 'ಅಂತರಂಗ' ಅವರ ಪುಸ್ತಕಗಳು. ಅವರು ಅನೇಕ ಕತೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ.